(ಇಂದು ದಿನಾಂಕಃ 05–03–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು **1** ಮತ್ತು **3** ನೇ ಪ್ರತಿವಾದಿ ಪರ ಃ ಶ್ರೀ ಪಿ ಬಿ ಪಿ ವಕೀಲರಿಂದ ಃ -

1) ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ನನಗೆ 1 ನೇ ವಾದಿಯು ಕರೆದುಕೊಂಡು ಬಂದಿರುತ್ತಾನೆ. 1 ನೇ ವಾದಿ ಹಾಗೂ 2 ಮತ್ತು 3 ನೇ ಪ್ರತಿವಾದಿಯರು ಸಹೋದರ ಸಹೋದರಿಯರು ಎಂದರೆ ಸರಿ.

2) ನನ್ನ ಮತ್ತು ವಾದಿಯ ಜಮೀನುಗಳು ಲಗತ್ತು ಇದೆ ಎಂದು ಹೇಳಲು ನನ್ನ ಜಮೀನಿನ ಸರ್ವೆ ಸಂಖ್ಯೆಯು 3 / 4 ಇರುತ್ತದೆ. 1 ನೇ ವಾದಿಯ ಹೊಲದ ಸರ್ವೆ ಸಂಖ್ಯೆ ಗೊತ್ತಿಲ್ಲ. 1 ನೇ ವಾದಿಯ ಹೊಲಕ್ಕೆ ಲಗತ್ತು 2 ಮತ್ತು 3 ನೇ ಪ್ರತಿವಾದಿಯರ ಹೊಲ ಇರುತ್ತದೆ ಎಂದರೆ ಸರಿ.

3) ನಿಪಿ-5 ಹಾಗೂ ನಿಪಿ-6 ಹೊಲಗಳ ನಡುವೆ 5 ಹೊಲಗಳು ಬರುತ್ತವೆ ಎಂದರೆ ಸರಿ. ಸದರಿ 5 ಹೊಲಗಳಲ್ಲಿ ನನಗೆ ಸೇರಿದ 2 ಹೊಲಗಳು ಇವೆ ಎಂದರೆ ಸರಿ. ನನ್ನ ಹೊಲದ ಪಕ್ಕದಲ್ಲಿ ಬಸವರಾಜ ಕಾಲವಾಡ ರವರ ಹೊಲ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ನನ್ನ ಸಹೋದರನಾಗಬೇಕು. ಬಸವರಾಜ ಕಾಲವಾಡ ರವರ ಹೊಲದ ನಂತರದಲ್ಲಿ 2 ನೇ ವಾದಿಯ ಹೊಲ ನಿಪಿ-5 ಬರುತ್ತದೆ ಎಂದರೆ ಸರಿ.

4) ಸಾಕ್ಷಿಗೆ ಈಗ ವಾದ ಪತ್ರದ ಲಗತ್ತು ಹಾತನಕಾಶೆಯನ್ನು ತೋರಿಸಿ ಅದರಲ್ಲಿ ವಾದಿಯು ಆತನ ಮತ್ತು 2 ನೇ ವಾದಿಯ ಹೊಲದ ನಡುವೆ ಕೇವಲ ಎರಡೂ ಹೊಲಗಳು ಬರುತ್ತವೆ ಎಂದು ನಮೂದು ಮಾಡಿರುತ್ತಾನೆ ಎಂದರೆ ಸಾಕ್ಷಿಯು 3 ಹೊಲಗಳು ಬರುತ್ತವೆ ಎಂದು ನುಡಿಯುತ್ತಾರೆ. ವಾದಿಯು ವಾದ ಪತ್ರದ ಲಗತ್ತು ಹಾತನಕಾಶೆಯಲ್ಲಿ ತಪ್ಪಾಗಿ ನಮೂದು ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

5) ಸಾಕ್ಷಿಗೆ ಈಗ ವಾದಿಯು ವಾದ ಪತ್ರದ ಲಗತ್ತು ಹಾತನಕಾಶೆಯನ್ನು ತೋರಿಸಿ ಅದರಲ್ಲಿ ಸರ್ವೆ ಸಂಖ್ಯೆ 104/2, 104/3 ಹಾಗೂ 104/4 ಹೊಲಗಳನ್ನು ನಮೂದು ಮಾಡಿಲ್ಲ ಎಂದರೆ ಸರಿ.

6) 1 ನೇ ವಾದಿಯು ನನ್ನ ಹೊಲದಿಂದ ಪೈಪಲೈನನ್ನು ಅಳವಡಿಸಿದ ಬಗ್ಗೆ ನಾನು ನ್ಯಾಯಾಲಯದ ಎದುರು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ವಾದಿಯು ಹೊಲದಲ್ಲಿ ಯಾವುದೇ ಪೈಪಲೈನನ್ನು ಅಳವಡಿಸದೇ ಇದ್ದರು ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಯು ಯಾವುದೇ ಪೈಪಲೈನನ್ನು ಅಳವಡಿಸದೇ ಇದ್ದ ಕಾರಣ ನಾನು ಯಾವುದೇ ದಾಖಲೆ ಅಥವಾ ಚಾಯಾಚಿತ್ರವನ್ನು ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ.

7) ವಾದಿಯು ತಮ್ಮ ವಾದ ಪತ್ರದಲ್ಲಿ ನನ್ನ ಆಸ್ತಿಯಲ್ಲಿ ಪೈಪಲೈನನ್ನು ಅಳವಡಿಸದ ಬಗ್ಗೆ ನಮೂದು ಮಾಡಿಲ್ಲ ಅಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯವನ್ನು ವಾದಿಯು ತನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

8) ದಾವಾ ಆಸ್ತಿಯ ಸಂಬಂದ ವಾದಿ ಹಾಗೂ ಪ್ರತಿವಾದಿಯರ ನಡುವೆ ವ್ಯಾಜ್ಯವಿದೆ ಎಂದರೆ ಸರಿ. ನನಗೆ ವಾದಿ ಪ್ರತಿವಾದಿಯರ ನಡುವೆ ಇದ್ದ ವ್ಯಾಜ್ಯದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲದೇ ಇದ್ದರು ಸಹ ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

9) ಪ್ರತಿವಾದಿಯರು, ವಾದಿಯು ಅಳವಡಿಸಿದ ಪೈಪಲೈನಗೆ ಹರಕತ್ತ ಮಾಡಬಾರದು ಎಂದು ನಾನು ಪ್ರತಿವಾದಿಯರಿಗೆ ಬುದ್ದಿ ಮಾತನ್ನು ಹೇಳಿರುವುದಿಲ್ಲ ಆದರೆ ವಾದಿಯು ನನ್ನ ಬಳಿ ಪೈಪಲೈನನ್ನು ಅಳವಡಿಸುವ ಬಗ್ಗೆ ಕೇಳಿಕೊಂಡಾಗ ನಾನು ಅಳವಡಿಸಲು ಅನುಮತಿಯನ್ನು ನೀಡಿರುತ್ತೇನೆ.

10) ವಾದಿಯು ಆತನ ಹೊಲದಲ್ಲಿ ಆಗಲಿ ಅಥವಾ ನನ್ನ ಹೊಲದಲ್ಲಿ ಆಗಲಿ ಯಾವುದೇ ಪೈಪಲೈನನ್ನು ಅಳವಡಿಸದೇ ಇದ್ದರು ಸಹ ಅಳವಡಿಸಿರುತ್ತಾನೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಪೈಪಲೈನ ಹಾಗೂ ಪಂಪಸೆಟ್ ಅಳವಡಿಸಿರುವುದಿಲ್ಲ ಆದ ಕಾರಣ ನ್ಯಾಯಾಲಯದ ಎದುರು ಅದರ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಸದರಿ ವಿಷಯವು ನನಗೆ ತಿಳಿದಿದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿ ವಾದಿ ಹಾಗೂ ಪ್ರತಿವಾದಿಯರ ಸಾಮೂಹಿಕ ಕಬ್ಜಾ ವಹಿವಾಟಿನಲ್ಲಿದ್ದು ಅದರ ಯಾವುದೇ ಪಾಲುವಿಭಾಗ ಆಗಿರುವುದಿಲ್ಲ ಎಂದರೆ ಸರಿ.

**2** ನೇ ಪ್ರತಿವಾದಿ ಪರ ಃ ಶ್ರೀಮತಿ ಪಿ ಸಿ ಹೆಚ್ / ಎಂ ಎಸ್ ಹೆಚ್ ವಕೀಲರಿಂದ ಃ **-**

1 ಮತ್ತು 3 ನೇ ಪ್ರತಿವಾದಿಯ ಪರ ವಕೀಲರು ಮಾಡಿದ ಪಾಟೀಸವಾಲನ್ನು ಅನುಸರಿಸಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು.

ಮರು ವಿಚಾರಣೆ ಃ ಇಲ್ಲಾ**.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**